"ಮಧುರ ಮಕ್ಕಳೇ- ನಮ್ಮ ತಂದೆ, ಶಿಕ್ಷಕ ಮತ್ತು ಸದ್ಗುರು ಮೂವರೂ ಕಂಬೈಂಡ್ ಆಗಿದ್ದಾರೆ ಎಂಬುದನ್ನು ನೆನಪಿಟ್ಟುಕೊಂಡರೂ ಸಾಕು, ಖುಷಿಯ ನಶೆಯೇರುವುದು, ಅವರ ಶ್ರೀಮತದಂತೆ ನಡೆಯುತ್ತಾ ಇರುತ್ತೀರಿ"

ಪ್ರಶ್ನೆ: ಬ್ರಾಹ್ಮಣರ ಮೊದಲ ಲಕ್ಷಣ ಯಾವುದು? ಯಾವ ಮಾತಿನಲ್ಲಿ ಬ್ರಾಹ್ಮಣರು ಅನುಭವಿಗಳಾಗಬೇಕಾಗಿದೆ?

ಉತ್ತರ: ಬ್ರಾಹ್ಮಣರ ಮುಖ್ಯಲಕ್ಷಣವಾಗಿದೆ- ಓದುವುದು ಮತ್ತು ಅನ್ಯರಿಗೆ ಓದಿಸುವುದಾಗಿದೆ. ಯಾರ ಮೇಲಾದರೂ ಜ್ಞಾನದ ರಂಗನ್ನು ಹಾಕುವುದರಲ್ಲಿ ತುಂಬಾ-ತುಂಬಾ ಅನುಭವಿಗಳಾಗಿ ಭಲೆ ಯಾರಾದರೂ ಅವಮಾನ ಮಾಡಲಿ, ನಿಂದನೆ ಮಾಡಲಿ ಆದರೆ ಪ್ರಯತ್ನಪಟ್ಟು ನೋಡಿದಾಗ ಅವರ ಮೇಲೆ ಪ್ರಭಾವವು ಅವಶ್ಯವಾಗಿ ಬೀರುವುದು. ಪಾತ್ರರನ್ನು ನೋಡಿ ದಾನ ಮಾಡಬೇಕು. ಅವಿನಾಶಿ ಧನವೂ ಸಹ ವ್ಯರ್ಥವಾಗಿ ಹೋಗಬಾರದು ಆದ್ದರಿಂದ ಬಹಳ ಎಚ್ಚರಿಕೆ ವಹಿಸಬೇಕು. ಯಾರಿಗಾದರೂ ಹಣವನ್ನು ಸಹ ಎಚ್ಚರಿಕೆಯಿಂದ ಕೊಡಬೇಕಾಗಿದೆ...............

ಗೀತೆ: ಯಾರು ತಂದೆಯ ಜೊತೆಯಿದ್ದಾರೆ ಅವರ ಮೇಲೆ ಜ್ಞಾನದ ಮಳೆ..........

ಓಂ ಶಾಂತಿ. ಈಶ್ವರೀಯ ವಿದ್ಯಾರ್ಥಿಗಳು ಈ ಗೀತೆಯನ್ನು ಕೇಳಿದಿರಿ. ನೀವು ಮಕ್ಕಳೇ ಈಶ್ವರೀಯ ವಿದ್ಯಾರ್ಥಿಗಳಾಗಿದ್ದೀರಿ. ಎಲ್ಲಾ ಶಾಲೆಗಳಲ್ಲಿಯೂ ಈಶ್ವರೀಯ ವಿದ್ಯಾರ್ಥಿಗಳಿರುವುದಿಲ್ಲ. ಅಲ್ಲಂತೂ ಮನುಷ್ಯರು ಓದಿಸುತ್ತಾರೆ, ಸನ್ಯಾಸಿಗಳೂ ಸಹ ಶಾಸ್ತ್ರವನ್ನು ತಿಳಿಸುತ್ತಾರೆ. ಜ್ಞಾನವನ್ನು ವಾಸ್ತವದಲ್ಲಿ ಯಾವುದೇ ಮಳೆ ಎಂದು ಹೇಳಲಾಗುವುದಿಲ್ಲ. ಮಳೆಯಂತೂ ನೀರಿನದಾಗುತ್ತದೆ ಆದರೆ ಈ ಮಹಿಮೆಯು ಗಾಯನ ಮಾಡಲ್ಪಟ್ಟಿದೆ ಏಕೆಂದರೆ ಪರಮಪಿತ ಪರಮಾತ್ಮನಿಗೆ ಜ್ಞಾನಸಾಗರನೆಂದೂ ಹೇಳಲಾಗಿದೆ. ತಂದೆಯು ತಿಳಿಸುತ್ತಾರೆ- ನನ್ನನ್ನು ಜ್ಞಾನಸಾಗರ, ಜ್ಞಾನಪೂರ್ಣನೆಂದೂ ಹೇಳುತ್ತಾರೆ. ಜ್ಞಾನವನ್ನು ಮಳೆ, ನೀರು ಅಥವಾ ಅಮೃತವೆಂದು ಕರೆಯುವುದಿಲ್ಲ. ಹೇಗೆ ಮಾನಸ ಸರೋವರದ ಕೊಳವಿದೆ, ಅಮೃತಸರದಲ್ಲಿಯೂ ಒಂದು ಸರೋವರವಿದೆ, ಅದನ್ನು ಮನುಷ್ಯರು ಅಮೃತವೆಂದು ತಿಳಿಯುತ್ತಾರೆ. ಇದನ್ನು ತಂದೆಯೇ ತಿಳಿಸುತ್ತಾರೆ, ವಿದ್ಯೆಯನ್ನು ಅಮೃತ ಅಥವಾ ಮಳೆಯೆಂದು ಹೇಳುವುದಿಲ್ಲ. ಇದು ಅಮೃತವಾಗಿದೆ. ಇದರಿಂದ ದುಃಖವು ದೂರವಾಗಿಬಿಡುತ್ತದೆ ಎಂದು ಮನುಷ್ಯರು ತಿಳಿಸುತ್ತಾರೆ. ವಾಸ್ತವದಲ್ಲಿ ಈ ಜ್ಞಾನದಿಂದ ನಿಮ್ಮ ಎಲ್ಲಾ ದುಃಖಗಳು 21 ಜನ್ಮಗಳಿಗಾಗಿ ದೂರವಾಗಿಬಿಡುತ್ತವೆ. ಯಾರು ತಂದೆಯ ಜೊತೆಯಿದ್ದಾರೆಯೋ ಅವರಿಗಾಗಿ ಜ್ಞಾನದ ಮಳೆಯಾಗಿದೆ. ಇಲ್ಲಿ ತಂದೆ, ಶಿಕ್ಷಕ, ಸದ್ಗುರು ಮೂವರೂ ಕಂಬೈಂಡ್ ಆಗಿದ್ದಾರೆ. ಈ ಒಂದು ಮಾತನ್ನೂ ಸಹ ಮಕ್ಕಳು ನೆನಪಿಟ್ಟುಕೊಂಡರೆ ಖುಷಿಯ ನಶೆಯೇರುವುದು. ಆದರೆ ಮಾಯೆಯು ಘಳಿಗೆ-ಘಳಿಗೆಯೂ ಮರೆಸಿಬಿಡುತ್ತದೆ. ಇಲ್ಲಿ ನೀವು ಮಕ್ಕಳು ಶ್ರೀಮತದಂತೆ ನಡೆಯುತ್ತೀರಿ. ಶ್ರೀಮತದಿಂದಲೇ ನೀವು ಶ್ರೇಷ್ಠರಾಗುತ್ತೀರಿ. ಭಗವಂತನು ಶ್ರೇಷ್ಠಾತಿಶ್ರೇಷ್ಠ ತಂದೆಯಾಗಿದ್ದಾರೆ. ಶ್ರೇಷ್ಠಾತಿಶ್ರೇಷ್ಠ ತಂದೆಯ ವಿದ್ಯೆಯಿಂದಲೇ ಶ್ರೇಷ್ಠಾತಿ ಶ್ರೇಷ್ಠರಾಗುತ್ತೀರಿ. ಈಗ ಯಾರು ತಂದೆಯ ಸನ್ಮುಖದಲ್ಲಿ ಕುಳಿತಿದ್ದೀರಿ, ಎಲ್ಲರೂ ವಿದ್ಯಾರ್ಥಿಗಳಾಗಿದ್ದೀರಿ. ಇಲ್ಲಿ ಕುಳಿತುಕೊಂಡು ಓದಿ ಮತ್ತೆ ತಮ್ಮ ಮನೆಗೆ ಹೋಗಬೇಕಾಗಿದೆ. ದಿನ-ಪ್ರತಿದಿನ ವಿದ್ಯಾರ್ಥಿಗಳಂತೂ ಅನೇಕರಾಗಿಬಿಡುತ್ತಾರೆ. ಒಂದುವೇಳೆ ಎಲ್ಲರನ್ನು ಒಂದೇ ಮನೆಯಲ್ಲಿ ಜೊತೆಯಲ್ಲಿಟ್ಟರೆ ಎಷ್ಟು ದೊಡ್ಡ ಮನೆಯು ಬೇಕಾಗುತ್ತದೆ! ಇಡೀ ಅಬುಪರ್ವತ ಮನೆ ಮಾಡಿಬಿಟ್ಟರೂ ಸಹ ಪೂರ್ಣವಾಗುವುದಿಲ್ಲ. ಎಷ್ಟೊಂದು ಸೇವಾಕೇಂದ್ರಗಳಿವೆ? ಈಗಂತೂ ಇನ್ನೂ ಕಡಿಮೆ ಜನಸಂಖ್ಯೆಯಿದೆ. ಮುಂದೆ ನಡೆದಂತೆ ಇದಕ್ಕಿಂತಲೂ ಸಾವಿರಪಟ್ಟು ಹೆಚ್ಚಾಗುತ್ತದೆ. ಒಂದು ಸಾವಿರ, ಎರಡು ಸಾವಿರ, 5-7 ಸಾವಿರ ಸೇವಾಕೇಂದ್ರಗಳು ಆಗಬಹುದು ನಂತರ ಮನೆ-ಮನೆಯಲ್ಲಿ ಜ್ಞಾನದ ಮಳೆಯನ್ನು ಸುರಿಸುತ್ತಾರೆ. ಅನೇಕರು ಮಕ್ಕಳಾಗಿಬಿಡುತ್ತಾರೆ. ಎಲ್ಲೆಲ್ಲಿ ನೋಡಿದರೂ ಸೇವಾಕೇಂದ್ರಗಳು ತೆರೆಯುತ್ತಿರುತ್ತವೆ. ಕೆಲವರು ಗೀತಾಪಾಠಶಾಲೆ ಎಂದು ಹೆಸರನ್ನಿಡುತ್ತಾರೆ, ಇನ್ನೂ ಕೆಲವರು ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಎಂದು ಹೆಸರನ್ನಿಡುತ್ತಾರೆ. ವಾಸ್ತವದಲ್ಲಿ ಬ್ರಹ್ಮಾಕುಮಾರಿ ಹೆಸರನ್ನಿಡುವುದರಿಂದ ಹೆದರಬಾರದು. ಕೆಲವು ಮಕ್ಕಳು ಬಿ.ಕೆ. ಹೆಸರನ್ನು ನೋಡಿ ಹೆದರುತ್ತಾರೆ ಆದ್ದರಿಂದ ಗೀತಾಪಾಠಶಾಲೆ ಎಂದು ಹೆಸರಿಡುತ್ತಾರೆ. ಗೀತಾಪಾಠಶಾಲೆ ಎಂಬ ಶಬ್ಧವಂತೂ ಸಾಮಾನ್ಯವಾಗಿದೆ. ಯಾವುದೇ ವಿಘ್ನವು ಬರದಿರಲಿ ಎಂದು ಬಿ.ಕೆ. ಎನ್ನುವ ಹೆಸರನ್ನು ಬದಲಾಯಿಸಿ ಇನ್ನೊಂದು ರೂಪವನ್ನು ಕೊಟ್ಟುಬಿಡುತ್ತಾರೆ. ವಾಸ್ತವದಲ್ಲಿ ಮಾತಂತೂ ಒಂದೇ ಆಗಿರುತ್ತದೆ. ಒಳಗಡೆ ಪ್ರವೇಶಿಸಿದಾಗ ಚಿತ್ರ ಇತ್ಯಾದಿಗಳನ್ನು ನೋಡಿ ತಕ್ಷಣ ಇವರಂತೂ ಅದೇ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದಾರೆಂದು ತಿಳಿದುಕೊಳ್ಳುತ್ತಾರೆ ಆದ್ದರಿಂದ ಹೆಸರನ್ನು ಬದಲಾಯಿಸುವ ಅವಶ್ಯಕತೆಯಿಲ್ಲ. ಇದರಿಂದಂತೂ ಇನ್ನೂ ಒಳ್ಳೆಯ ರೀತಿಯಲ್ಲಿ ಸಿದ್ಧವಾಗುತ್ತದೆ- ವಾಸ್ತವದಲ್ಲಿ ಇವರು ಬ್ರಹ್ಮಾರವರ ಸಂತಾನ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದಾರೆ. ಇದಂತೂ ಒಳ್ಳೆಯದಲ್ಲವೆ. ನೀವು ಎಲ್ಲರಿಗೂ ತಿಳಿಸಬಹುದು- ವಾಸ್ತವದಲ್ಲಿ ನೀವೂ ಸಹ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ಪ್ರಜಾಪಿತ ಬ್ರಹ್ಮನನ್ನಂತೂ ತಿಳಿದುಕೊಂಡಿದ್ದೀರಿ. ಅವರು ಮನುಷ್ಯ ಸೃಷ್ಟಿಯ ರಚಯಿತನಾಗಿದ್ದಾರೆ. ನಿರಾಕಾರ ಪರಮಪಿತ ಪರಮಾತ್ಮ ಯಾವುದೇ ಆತ್ಮಗಳ ರಚಯಿತನಲ್ಲ. ಅವರಂತೂ ಆತ್ಮಗಳ ಅನಾದಿ

ತಂದೆಯಾಗಿದ್ದಾರೆ. ಪ್ರಜಾಪಿತ ಬ್ರಹ್ಮನೂ ಅನಾದಿಯಾಗಿದ್ದಾರೆ. ಆತ್ಮಗಳ ತಂದೆಯೂ ಇವರಲ್ಲಿ ಬರುತ್ತಾರೆ, ಬಂದು ಬ್ರಹ್ಮಾರವರನ್ನು ಪ್ರಜಾರಚನೆಗಾಗಿ ದತ್ತು ಮಾಡಿಕೊಳ್ಳುತ್ತಾರೆ. ಬ್ರಹ್ಮಾರವರ ಮುಖಾಂತರ ಬ್ರಾಹ್ಮಣಕುಲವನ್ನು ರಚಿಸಬೇಕಾಗಿದೆ. ಇದನ್ನು ತಿಳಿಸುವುದರಲ್ಲಿ ಇನ್ನೂ ಸಹಜವಾಗುತ್ತದೆ ಆದರೆ ಹೆದರುತ್ತಾರೆ. ಬಿ.ಕೆ.ಗಳ ಬಳಿ ಹೋಗಬೇಡಿ ಎಂದು ಹೇಳುತ್ತಾರೆ. ಗೀತಾಪಾಠಶಾಲೆಯಲ್ಲಿ ಭಲೆ ಹೋಗಿ ಎನ್ನುತ್ತಾರೆ. ಮನೆ-ಮನೆಯಲ್ಲಿ ಜ್ಞಾನಗಂಗೆಯ ಅರ್ಥವನ್ನೂ ಸಹ ಮನುಷ್ಯರು ತಿಳಿದುಕೊಂಡಿಲ್ಲ.

ಭಕ್ತಿಮಾರ್ಗದಲ್ಲಿ ನಾರದನನ್ನು ಮುಖ್ಯವಾಗಿರುವವರೆಂದು ತಿಳಿಸಲಾಗಿದೆ. ತಂಬೂರಿಯನ್ನು ನುಡಿಸುವ ಭಕ್ತನಾಗಿದ್ದರು, ನಾರದನ ಚಿತ್ರವನ್ನು ಹೇಗೆ ತೋರಿಸುತ್ತಾರೆಯೋ ಆ ರೀತಿಯ ರೂಪವುಳ್ಳವರಲ್ಲ. ವಾಸ್ತವದಲ್ಲಿ ನೀವೆಲ್ಲರೂ ಕೋತಿಗಳ ಸಮಾನರಾಗಿದ್ದಿರಿ. ಚಹರೆಯು ಭಲೆ ಮನುಷ್ಯನದು ಆದರೆ ಗುಣಗಳು ಕೋತಿಯದಾಗಿತ್ತು. ಹಾಗೆ ನೋಡಿದರೆ ಎಲ್ಲರೂ ನಾರದರಾಗಿದ್ದಾರೆ ಏಕೆಂದರೆ ಎಲ್ಲರೂ ಭಕ್ತರಲ್ಲವೆ. ಎಲ್ಲಿಯತನಕ ನಾವು ದೈವೀಗುಣವುಳ್ಳ ಮನುಷ್ಯರಾಗುವುದಿಲ್ಲವೋ ಅಲ್ಲಿಯತನಕ ನಾವು ಲಕ್ಷ್ಮಿಯನ್ನು ವರಿಸಲು ಸಾಧ್ಯವಿಲ್ಲ ಎಂದು ತಿಳಿಯಬಹುದು. ಎಲ್ಲಾ ಸ್ತ್ರೀ ಅಥವಾ ಪುರುಷಭಕ್ತರು ನಾರದರಾಗಿದ್ದಾರೆ. ಹೇಳಲಾಗುತ್ತದೆ- ತಮ್ಮ ಮುಖವನ್ನು ನೋಡಿಕೊಳ್ಳಿ, ನೀವಂತೂ ಕೋತಿಯ ಸಮಾನವಾಗಿದ್ದಿರಿ ಏಕೆಂದರೆ ನಿಮ್ಮಲ್ಲಿ ಪಂಚವಿಕಾರಗಳಿವೆ ಆದ್ದರಿಂದ ಲಕ್ಷ್ಮಿಯನ್ನು ವರಿಸಲು ಸಾಧ್ಯವಿಲ್ಲ. ಇದೆಲ್ಲವೂ ಇಲ್ಲಿಯ ಮಾತಾಗಿದೆ. ತಂದೆಯು ತಿಳಿಸಿದ್ದಾರೆ- ಎಲ್ಲರೂ ದುಶ್ಯಾಸನ ಅಥವಾ ದುರ್ಯೋಧನರಾಗಿದ್ದಾರೆ. ದ್ರೌಪದಿಯರ ಸೀರೆಯನ್ನು ಎಳೆಯುತ್ತಾರೆ ಆದ್ದರಿಂದ ಮಾತೆಯರು ನಮ್ಮನ್ನು ಪತಿತರಾಗುವುದರಿಂದ ಪಾರು ಮಾಡಿ, ರಕ್ಷಿಸಿ ಎಂದು ಕರೆಯುತ್ತಾರೆ. ಕನ್ಯೆಯರೂ ಸಹ ನಮ್ಮನ್ನು ರಕ್ಷಿಸು ಗಿರಿಧರ ಎಂದು ಹೇಳುತ್ತಾರೆ. ಅನೇಕ ಹೆಸರುಗಳನ್ನಿಟ್ಟಿದ್ದಾರೆ. ಮನುಷ್ಯರ ಬುದ್ಧಿಯೋಗವು ಕೃಷ್ಣನ ಕಡೆ ಹೊರಟುಹೋಗುತ್ತದೆ ಆದರೆ ದೇಹಧಾರಿ ಕೃಷ್ಣನನ್ನು ನೆನಪು ಮಾಡುವುದರಿಂದ ವಿಕರ್ಮ ವಿನಾಶವಾಗಲು ಸಾಧ್ಯವಿಲ್ಲ. ಸಾಕ್ಷಾತ್ಕಾರವಾಗಬೇಕೆಂದು ಬಯಸುತ್ತಾರೆ. ಒಂದುವೇಳೆ ಸಾಕ್ಷಾತ್ಕಾರವಾಗಿಬಿಡುತ್ತದೆ ಆದರೆ ಮನುಷ್ಯರಿಂದ ದೇವತೆಗಳಾಗುವ ಜ್ಞಾನವಂತೂ ಸಿಗುವುದಿಲ್ಲ. ಎಲ್ಲಿಯತನಕ ಬ್ರಾಹ್ಮಣರಾಗುವುದಿಲ್ಲವೋ, ಜ್ಞಾನವನ್ನು ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯತನಕ ದೇವತೆಗಳಾಗಲು ಸಾಧ್ಯವಿಲ್ಲ. ಬ್ರಾಹ್ಮಣರಾಗುವುದರಿಂದ ಭಕ್ತಿಯು ಬಿಟ್ಟುಹೋಗುತ್ತದೆ. ಮೊದಲು ಒಂದು ವಾರದ ಸಮಯವಂತೂ ಹಿಡಿಸುತ್ತದೆ. ಇದಂತೂ ಅವಶ್ಯವಾಗಿದೆ- ನೀವು ತಂದೆಯ ಜೊತೆಯಿದ್ದೀರಿ, ತಂದೆಯ ಬಳಿ ಬರುತ್ತೀರಿ ನಂತರ ಹೋಗುತ್ತೀರೆಂದರೆ ಎಷ್ಟು ಮನಸ್ಸಿನಲ್ಲಿ ದುಃಖವಾಗುತ್ತದೆ! ಆದರೆ ಎಲ್ಲರೂ ಇಲ್ಲಿ ಜೊತೆಯಿರಲು ಸಾಧ್ಯವಿಲ್ಲ. ಕೆಲವರು ಕೆಲವೊಂದು ಕಡೆಯಿಂದ, ಇನ್ನೂ ಕೆಲವರು ಇನ್ನೂ ಕೆಲವೆಡೆಯಿಂದ ಓಡಿಬರುತ್ತಾರೆ. ಇಲ್ಲಿನ ಪದ್ಧತಿಯೇ ಇದಾಗಿದೆ. ಬೇರೆ ಸಾಧು-ಸಂತ ಮುಂತಾದವರ ಬಳಿಯಂತೂ ಹೋಗಿ ಒಟ್ಟಿಗೆ ಇರುತ್ತಾರೆ. ಯಾರನ್ನು ಯಾರೂ ನಿಷೇಧಿಸುವುದಿಲ್ಲ. ಇಲ್ಲಂತೂ ಪವಿತ್ರರಾಗುವ ಮಾತು ಬರುತ್ತದೆ ಆದ್ದರಿಂದ ತಡೆಯುತ್ತಾರೆ. ಸನ್ಯಾಸಿಗಳಲ್ಲಂತೂ ಕೇವಲ ಪುರುಷರು ಮನೆ-ಮಠವನ್ನು ಬಿಟ್ಟು ಹೊರಟುಹೋಗುತ್ತಾರೆ. ಇಲ್ಲಂತೂ ಕುಮಾರಿಯರು, ಮಾತೆಯರು ಎಲ್ಲರೂ ಇದ್ದಾರೆ. ಕನ್ಯೆಯರಿಗೆ ತಂದೆ-ತಾಯಿ, ಡಾಕ್ಟರ್ ಮುಂತಾದವರು ಹೇಳುತ್ತಾರೆ. ಮದುವೆ ಮಾಡಿಕ್ಕೊಳ್ಳಲಿಲ್ಲವೆಂದರೆ ಖಾಯಿಲೆ ಬರುತ್ತೆ ಎಂದು. ಅವರಿಗೆ ತಿಳಿಸಬೇಕು- ಅರೆ! ಎಷ್ಟು ಜನ ಸನ್ಯಾಸಿಗಳಾಗುತ್ತಾರೆ. ಅತಿ ಚಿಕ್ಕ-ಚಿಕ್ಕವರು ಬ್ರಹ್ಮಚಾರಿಯಾಗಿ ಅಲ್ಲಿರುತ್ತಾರೆ. ಆ ಬ್ರಹ್ಮಚಾರಿಗಳಂತೂ ಎಂದೂ ರೋಗಿಗಳಾಗುವುದಿಲ್ಲ. ಇಲ್ಲಿ ಏಕೆ ರೋಗಿಗಳಾಗುತ್ತಾರೆ? ಮದುವೆ ಆಗದೆಯೇ ಅನೇಕರಿರುತ್ತಾರೆ. ಸನ್ಯಾಸಿಗಳ ಮೇಲೂ ಸಹ ಯಾರೂ ಕೇಸ್ ಮಾಡುವುದಿಲ್ಲ. ಎಂದೂ ಯಾವುದೇ ಸ್ತ್ರೀ ಅವರಿಂದ ಮನೆಯ ಖರ್ಚನ್ನು ಕೇಳುವುದಿಲ್ಲ. ಅವರಂತೂ ಓಡಿ ಹೋಗುತ್ತಾರೆ. ಸ್ತ್ರೀ ಖರ್ಚನ್ನು ಎಲ್ಲಿಂದ ತರುತ್ತಾರೆ ನಂತರ ಅಕ್ಕಪಕ್ಕದವರು ಅವರನ್ನು ಸಂಭಾಲನೆ ಮಾಡುತ್ತಾರೆ. ಹೆಚ್ಚಿನದಾಗಿ ಬಡವರೇ ಮನೆ-ಮಠವನ್ನು ಬಿಟ್ಟು ಓಡಿಹೋಗುತ್ತಾರೆ. ದುಃಖಿಯಾಗುತ್ತಾರೆಂದರೆ ನಂತರ ವೈರಾಗ್ಯವು ಬರುವುದು. ಭಲೆ ನೀವೂ ದುಃಖಿಯಾಗಿದ್ದಿರಿ ಆದರೆ ವೈರಾಗ್ಯದ ಮಾತಿಲ್ಲ. ನಿಮಗಂತೂ ಮೊದಲು ಅಂಗೈಯಲ್ಲಿ ಸ್ವರ್ಗವನ್ನು ತೋರಿಸಲಾಗುತ್ತದೆ. ಪವಿತ್ರರಾಗದ ವಿನಃ ವೈಕುಂಠಕ್ಕೆ ಹೇಗೆ ಹೋಗುತ್ತೀರಿ! ಸಾಹಸವಂತರಾಗಬೇಕು ಆದ್ದರಿಂದಲೇ ಶಿವಶಕ್ತಿ ಸೈನ್ಯದ ಹೆಸರಿದೆ. ಶಿವತಂದೆಯ ಜೊತೆ ಯೋಗವನ್ನು ಇಡುವುದರಿಂದ ಶಕ್ತಿಯು ಸಿಗುತ್ತದೆ. ಜ್ಞಾನದ ಧಾರಣೆಯಾದ ನಂತರ ಸಮರ್ಪಣೆಯಾಗಬೇಕಾಗಿದೆ. ಜ್ಞಾನದ ಧಾರಣೆಯಾಗಲಿಲ್ಲ, ನಷ್ಟಮೋಹಿಗಳಾಗಲಿಲ್ಲವೆಂದರೆ ಮಾಯೆಯು ಬಂದು ಸತಾಯಿಸುತ್ತದೆ. ಇಲ್ಲಿಗೆ ಬಂದನಂತರ ಒಂದುವೇಳೆ ಮದುವೆಯಾಗುವ ಮನಸ್ಸಾದರೆ ಮತ್ತೆ ಎಲ್ಲಾ ಬ್ರಹ್ಮಾಕುಮಾರಿಯರ ಹೆಸರೇ ಕೆಟ್ಟುಹೋಗುತ್ತದೆ ಆದ್ದರಿಂದ ಮೊದಲು ನಷ್ಟಮೋಹಿಗಳಾಗಬೇಕು. ನೀವೆಲ್ಲರೂ ಭಟ್ಟಿಯಲ್ಲಿದ್ದಿರಿ ಆಗ ಅನೇಕರು ನಷ್ಟಮೋಹಿಗಳಾಗಿರಲಿಲ್ಲ, ನೆನಪು ಬರುತ್ತಿತ್ತು. ಇಲ್ಲಿಂದ ಹೋದರು, ಮಿತ್ರ-ಸಂಬಂಧಿಗಳ ಮುಖವನ್ನು ನೋಡಿದ ತಕ್ಷಣ ಮೋಹವು ಹೆಚ್ಚಾಗಿ ಅಲ್ಲಿಯೇ ಕುಳಿತುಕೊಂಡುಬಿಟ್ಟರು. ಮೋಹವು ಹಾರಿಸಿಬಿಟ್ಟಿತು, ಇದೂ ಸಹ ನಾಟಕದ ಪೂರ್ವನಿಶ್ಚಿತವಾಗಿದೆ. ಈಗಲೂ ತಂದೆಯು ತಿಳಿಸುತ್ತಾರೆ- ಮೊದಲು ನಷ್ಟಮೋಹಿಗಳಾಗಿ, ಒಬ್ಬ ಪ್ರಿಯಾತಿಪ್ರಿಯ ತಂದೆಯ ಮಕ್ಕಳಾಗಿ. ಏನೇ ಆಗಲಿ ನಾವಂತೂ ತಂದೆಯ ಸೇವೆಯಲ್ಲಿಯೇ ಇರುತ್ತೇವೆ ಎನ್ನುವ ನಿಶ್ಚಯವಿರಲಿ. ಹೇಳಲಾಗುತ್ತದೆಯಲ್ಲವೆ- ಏರಿದರೆ ವೈಕುಂಠರಸ ಬಿದ್ದರೆ ಪುಡಿಪುಡಿ. ಅಲ್ಲಿಂದ ಬಿಟ್ಟುಬಂದ ನಂತರ ಮೋಹವು ಸತಾಯಿಸಬಾರದು. ಹೀಗೆ ಅನೇಕ ಸನ್ಯಾಸಿಗಳು ಹೋಗಿ ಹಿಂತಿರುಗಿ ಬಂದುಬಿಡುತ್ತಾರೆ. ಸನ್ಯಾಸಿಗಳು ಮನೆಗೆ ಹಿಂತಿರುಗಿ ಬಂದರೆ ಅಕ್ಕಪಕ್ಕದವರು ತುಂಬಾ ಮಾತನಾಡಿಕೊಳ್ಳುತ್ತಾರೆ. ಇವರು ಕಾಮಕ್ಕಾಗಿ ಓಡಿಬಂದಿದ್ದಾರೆಂದು ತಿಳಿಯುತ್ತಾರೆ. ಹಾಗೆಯೇ ಇಲ್ಲಿಯೂ ಸಹ ಇವರು ಪೂರ್ಣ ನಷ್ಟಮೋಹಿಗಳಾಗಿರಲಿಲ್ಲ, ವಿಕಾರಗಳು ಮುತ್ತಿಗೆ ಹಾಕಿತೆಂದು

ತಿಳಿಯಲಾಗುತ್ತದೆ. ತಂದೆಯ ಬಳಿ ಯಾವುದೇ ಆಹಾರ ಪದಾರ್ಥಗಳ ತೊಂದರೆಯಿಲ್ಲ. ಪ್ರಾರಂಭದಿಂದ ಹಿಡಿದು ಎಷ್ಟೊಂದು ಸಂಭಾಲನೆ ಮಾಡುತ್ತಾ ಬಂದಿದ್ದೇವೆ. ಇಲ್ಲಿ ಬಡವರು, ಸಾಹುಕಾರರು ಒಂದೇ ಸಮಾನ. ಮಮ್ಮಾ-ಬಾಬಾರವರು ಎಲ್ಲರಿಗೂ ಕಲಿಸುವುದಕ್ಕಾಗಿ ಪಾತ್ರೆಗಳನ್ನು ತೊಳೆಯುತ್ತಿದ್ದರು, ಕಸ ಗುಡಿಸುತ್ತಿದ್ದರು. ಇದೆಲ್ಲಾ ಸೇವೆಯನ್ನು ದೇಹಾಭಿಮಾನ ಬಿಡುವುದಕ್ಕಾಗಿ ಮಾಡಲಾಗುತ್ತದೆ. ಸನ್ಯಾಸಿಗಳೂ ಸಹ ಹೀಗೆಯೇ ಮಾಡಿಸುತ್ತಾರೆ. ಯಾರಾದರೂ ಹಿರಿಯ ವ್ಯಕ್ತಿಗಳಿದ್ದರೆ ಅವರಿಂದ ಸೌದೆ ಕತ್ತರಿಸುವ ಸೇವೆಯನ್ನು ಮಾಡಿಸುತ್ತಾರೆ. ಇಲ್ಲಂತೂ ಅತಿ ದೊಡ್ಡ ಆಸ್ತಿಯು ಸಿಗುತ್ತದೆ. ಇಲ್ಲಿ ಬಾಬಾ ಒಂದು ಸೆಕೆಂಡಿನಲ್ಲಿ 21 ಜನ್ಮಗಳ ರಾಜ್ಯಭಾಗ್ಯ! ಸನ್ಯಾಸಿಗಳ ಬಳಿಯಂತೂ ಯಾವುದೇ ಪ್ರಾಪ್ತಿಯಿಲ್ಲ. ಕೇವಲ ಪವಿತ್ರರಾಗಿದ್ದಾರೆ ಆದ್ದರಿಂದ ಅಪವಿತ್ರರು ಹೋಗಿ ತಲೆಬಾಗಿಸುತ್ತಾರೆ. ಇದಂತೂ ರಾಜಯೋಗವಾಗಿದೆ, ವಿಶ್ವದ ಮಾಲೀಕರಾಗುತ್ತೀರಿ.

ವಿಕಾರದಲ್ಲಿ ಹೋಗಬಾರದು. ಮೀರಾಳೂ ಸಹ ಪವಿತ್ರವಾಗಿರಲು ಬಯಸುತ್ತಿದ್ದಳಲ್ಲವೇ. ಅವರಂತೂ ಭಕ್ತಿಮಾರ್ಗದಲ್ಲಿದ್ದರು. ಕೃಷ್ಣನ ಸಾಕ್ಷಾತ್ಕಾರವನ್ನು ನೋಡುತ್ತಿದ್ದರು. ಕೃಷ್ಣನೊಂದಿಗೆ ಆಕೆಯ ಮನಸ್ಸಾಯಿತು ಅಂದಮೇಲೆ ಆಕೆಯು ವಿಕಾರದಲ್ಲಿ ಹೇಗೆ ಹೋಗುತ್ತಾಳೆ? ಅದೂ ಒಂದು ಜನ್ಮದಲ್ಲಷ್ಟೇ. ಮೀರಾ ಭಲೆ ಇನ್ನೊಂದು ಜನ್ಮದಲ್ಲಿಯೂ ಭಕ್ತಿಮಾರ್ಗದಲ್ಲಿ ಹೋಗಿರಬಹುದು. ಈ ರೀತಿಯೂ ಹೇಳಬಹುದು- ಆಕೆಯು ಭಕ್ತಿಮಾರ್ಗದಲ್ಲಿ ಹೋದಳು ಏಕೆಂದರೆ ಅಂತ್ಯಮತಿ ಸೋ ಗತಿಯಾಗುತ್ತದೆ. ಕೃಷ್ಣನೊಂದಿಗೆ ಮನಸ್ಸಿದ್ದ ಕಾರಣ ಭಕ್ತಿನಿಯೇ ಆಗಿರಬಹುದು ಆದರೆ ಭಕ್ತಿಮಾರ್ಗದಲ್ಲಂತೂ ಏನೂ ಸಿಗಲಿಲ್ಲ. ಜ್ಞಾನಮಾರ್ಗದಲ್ಲಿ 21 ಜನ್ಮಗಳ ಆಸ್ತಿಯು ಸಿಗುತ್ತದೆ. ಮೊದಲು ಶಿವನ ಭಕ್ತಿಯನ್ನೇ ಮಾಡುತ್ತಾರೆ ನಂತರ ದೇವತೆಗಳದು. ಈಗಂತೂ ನೋಡಿ- ನಾಯಿ, ಬೆಕ್ಕು, ಮುಂತಾದುವುಗಳ ಭಕ್ತಿಯನ್ನು ಮಾಡಲು ತೊಡಗಿಬಿಟ್ಟಿದ್ದಾರೆ. ಕೃಷ್ಣನನ್ನು ಬಿಟ್ಟು ಹನುಮಂತ, ಗಣೇಶ ಮುಂತಾದವರ ಭಕ್ತಿಯನ್ನು ಮಾಡಲು ತೊಡಗುತ್ತಾರೆ. ಸತ್ಯಯುಗ, ತ್ರೇತಾಯುಗದಲ್ಲಿ ಕಲೆಗಳು ಕಡಿಮೆಯಾಗುತ್ತಾ ಹೋಗುತ್ತವೆ ಮತ್ತು ಭಕ್ತಿಯಲ್ಲಿಯೂ ಸಹ ಕಲೆಗಳು ಕಡಿಮೆಯಾಗುತ್ತಾ ಹೋಗುತ್ತವೆ. ಈಗಂತೂ ಯಾವುದೇ ಕೆಲಸಕ್ಕೆ ಬರುವುದಿಲ್ಲ. ಯಾವಾಗ ಇಂತಹ ಸ್ಥಿತಿಯಾಗುತ್ತದೆ ಆಗ ತಂದೆಯು ಬಂದು ತಿಳಿಸುತ್ತಾರೆ. ಅರ್ಧಕಲ್ಪ ಮೇಲೇರುತ್ತೀರಿ ಮತ್ತೆ ಅರ್ಧಕಲ್ಪದ ನಂತರ ಇಳಿಯುವುದು ಪ್ರಾರಂಭವಾಗುತ್ತದೆ. ಮನುಷ್ಯರು ತಿಳಿಯುತ್ತಾರೆ- ಕೆಳಗಿಳಿಯಲೇಬೇಕಾಗಿದೆ ಅಂದಮೇಲೆ ಜ್ಞಾನವನ್ನು ಪಡೆದು ಏನು ಮಾಡುವುದು? ಆದರೆ ಈಶ್ವರೀಯ ಜ್ಞಾನವಿಲ್ಲದೆ ಮನುಷ್ಯರು ಯಾವುದೇ ಕೆಲಸಕ್ಕೆ ಬರುವುದಿಲ್ಲ. ನಾವು, ನೀವು ಏನಾಗಿದ್ದೇವೆ, ಏನೇನೂ ಇಲ್ಲ. ಜ್ಞಾನವು ಅವಶ್ಯವಾಗಿ ಬೇಕು. ಶರೀರ ನಿರ್ವಹಣೆಗಾಗಿ ಓದುತ್ತಾರಲ್ಲವೆ. ಕನ್ಯೆಯರೂ ಸಹ ಇತ್ತೀಚಿನ ದಿನಗಳಲ್ಲಿ ಶರೀರ ನಿರ್ವಹಣೆಗಾಗಿ ಓದಬೇಕಾಗುತ್ತದೆ. ಮೊದಲು ಈ ಕಾಯಿದೆಯಿರಲಿಲ್ಲ. ಕನ್ಯೆಯರು ಮನೆಯನ್ನು ಸಂಭಾಲನೆ ಮಾಡುತ್ತಿದ್ದರು. ಗಂಡು ಮಕ್ಕಳು ನೌಕರಿಗಾಗಿ ಓದುತ್ತಿದ್ದರು. ಈಗ ಬೇಹದ್ದಿನ ತಂದೆಯು ನೀವು ಮಕ್ಕಳಿಗೆ ಓದಿಸುತ್ತಿದ್ದಾರೆ. ಒಂದುವೇಳೆ ಎಲ್ಲರೂ ಇಲ್ಲಿ ಕುಳಿತುಬಿಟ್ಟರೆ ನಂತರ ಮಿತ್ರ-ಸಂಬಂಧಿ ಮುಂತಾದವರಿಗೆ ಜ್ಞಾನವನ್ನು ಹೇಗೆ ಕೊಡುತ್ತೀರಿ? ಹೋಗಲೇಬೇಕಾಗುತ್ತದೆ. ಓದಬೇಕು ಮತ್ತು ಓದಿಸಬೇಕಾಗಿದೆ. ಕೆಲವರಂತೂ ಓದುವುದೇ ಇಲ್ಲ ಆದ್ದರಿಂದ ಇವರು ನಮ್ಮ ಬ್ರಾಹ್ಮಣ ಕುಲದವರಲ್ಲವೆಂದು ತಿಳಿಯಬೇಕು. ಜ್ಞಾನದ ರಂಗನ್ನು ಹಾಕುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕು. ಇದರಲ್ಲಿ ಹೆದರುವ ಮಾತಿಲ್ಲ. ಪ್ರಯತ್ನಪಟ್ಟಾಗ ಒಬ್ಬರಲ್ಲಾ ಒಬ್ಬರಿಗೆ ಜ್ಞಾನದ ಬಣ್ಣವು ಅಂಟುತ್ತದೆ. ಭಲೆ ಯಾರೇ ನಿಂದನೆ ಮಾಡಲಿ, ಅಗೌರವಗೊಳಿಸಲಿ ನೀವು ಪುರುಷಾರ್ಥ ಮಾಡಿ ನೋಡಿ, ಆಗ ಒಬ್ಬರಲ್ಲಾ ಒಬ್ಬರ ಮೇಲೆ ಪ್ರಭಾವವು ಅವಶ್ಯವಾಗಿ ಬೀರುವುದು. ಹೇಗೆ ಚೇಳು ಮೃದುವಾದ ಜಾಗವನ್ನು ನೋಡಿ ಅಲ್ಲಿ ಕುಟುಕುತ್ತದೆ ಮತ್ತು ಪರಿಶೀಲನೆ ಮಾಡುತ್ತದೆ. ಇಲ್ಲಿಯೂ ಸಹ ಮಕ್ಕಳು ತುಂಬಾ ಅನುಭವಿಗಳಾಗಬೇಕು. ಅವಿನಾಶಿ ಧನವನ್ನು ಎಲ್ಲಿಯೂ ವ್ಯರ್ಥವಾಗಿ ಯಾರಿಗೂ ಕೊಡಬಾರದು. ಪಾತ್ರರನ್ನು ನೋಡಿ ದಾನ ಮಾಡಬೇಕು. ಒಂದುವೇಳೆ ಯಾರಿಗಾದರೂ ದಾನ ಕೊಟ್ಟಿರಿ ಮತ್ತು ಅವರು ಅದರಿಂದ ಯಾವುದೇ ವಿಕರ್ಮ ಮಾಡಿಬಿಟ್ಟರೆ ಅವರ ಪಾಪವು ದಾನವನ್ನು ಕೊಡುವವರ ಮೇಲೆ ಬಂದುಬಿಡುತ್ತದೆ. ಇಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಹಣವನ್ನಂತೂ ಬಹಳ ಎಚ್ಚರಿಕೆಯಿಂದ ಯಾರಿಗಾದರೂ ಕೇಳಿ ಕೊಡಬೇಕು. ಇಲ್ಲಿ ಏನೆಲ್ಲವನ್ನೂ ಕಟ್ಟುತ್ತಿರುವರೋ ಅವೆಲ್ಲವೂ ಅತೀ ಶೀಘ್ರದಲ್ಲಿ ಒಡೆದು ನುಚ್ಚುನೂರಾಗುತ್ತವೆ. ಈ ಮನೆಗಳೂ ಎಲ್ಲವೂ ಸಹ ಮಕ್ಕಳಿರುವುದಕ್ಕಾಗಿಯೇ ಆಗಿದೆ. ಇದಂತೂ ನಿಮಗೆ ಗೊತ್ತಿದೆ- ಎಲ್ಲವೂ ಬೀಳಲಿದೆ, ಭೂಕಂಪವಾದರೆ ಮಂದಿರ ಇತ್ಯಾದಿಗಳ್ಯಾವುವು ಇರುವುದಿಲ್ಲ. ಕೇವಲ ಭಾರತಖಂಡವಷ್ಟೇ ಇರುತ್ತದೆ. ಬಾಕಿ ಪ್ರಪಂಚವಂತೂ ಘೋರ ಅಂಧಕಾರದಲ್ಲಿದೆ. ತಂದೆಯದು ಇದು ಎಷ್ಟು ದೊಡ್ಡ ಶಾಲೆಯಾಗಿದೆ. ಇದರಲ್ಲಿ ಶಿಕ್ಷಕಿಯರು ನಂಬರ್ವಾರ್ ಇದ್ದಾರೆ. ಎಲ್ಲರೂ ಸಮಾನರಾಗಿರುವುದಿಲ್ಲ. ಇದರಲ್ಲಿ ನೀವು ನೋಡುತ್ತೀರಿ- ಎಲ್ಲರಿಗಿಂತ ದೊಡ್ಡಶಿಕ್ಷಕರು ಶಿವತಂದೆಯಾಗಿದ್ದಾರೆ ನಂತರ ಈ ಬ್ರಹ್ಮಪುತ್ರ ನದಿಯಾಗಿದ್ದಾರೆ. ತ್ವಮೇವ ಮಾತಾಶ್ಚ..... ಎಂದು ಹೇಳುತ್ತಾರೆಂದರೆ ಇವರು ತಾಯಿಯಾದರಲ್ಲವೆ. ನಂತರ ಸರಸ್ವತಿಯ ಹೆಸರೂ ಇದೆ. ಬ್ರಹ್ಮಾರವರ ರಾಶಿಯ ಮೇಲೆ ಬ್ರಹ್ಮಪುತ್ರ ನದಿಯು ಸರಿಯಾಗಿದೆ. ಸಾಗರ ಮತ್ತು ಬ್ರಹ್ಮಪುತ್ರ ನದಿಯ ಮೇಳವಾಗುತ್ತದೆ ಎಂಬುದನ್ನೂ ತೋರಿಸುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪ್ರಿಯಾತಿಪ್ರಿಯ ತಂದೆಗೆ ಸಂಪೂರ್ಣ ಸಮರ್ಪಣೆಯಾಗುವ ಮುಂಚೆಯೇ ಸಂಪೂರ್ಣ ನಷ್ಟಮೋಹಿಗಳಾಗಬೇಕು. ಯಾವಾಗ ಸ್ಥಿತಿಯು ಪಕ್ಕಾ ಆಗಿಬಿಡುತ್ತದೆಯೋ ಆಗ ಸೇವೆಯಲ್ಲಿ ತೊಡಗಬೇಕಾಗಿದೆ.

2. ಈ ಪ್ರಪಂಚದಿಂದ ಹೃದಯದ ವೈರಾಗ್ಯವಿಟ್ಟು ಪವಿತ್ರರಾಗುವುದರಲ್ಲಿ ಸಾಹಸವಂತರಾಗಬೇಕು. ಜ್ಞಾನವನ್ನು ಬಹಳ ಎಚ್ಚರಿಕೆಯಿಂದ ಪಾತ್ರರನ್ನು ನೋಡಿ ಕೊಡಬೇಕಾಗಿದೆ.

ವರದಾನ: ಪರಿಸ್ಥಿತಿಗಳನ್ನು ದಾಟಿಹೋಗುವ ದೃಶ್ಯಗಳೆಂದು ತಿಳಿದು ಪಾರುಮಾಡಿ ಮುಂದೆ ಹೋಗುವಂತಹ ಮಾಸ್ಟರ್ ಸರ್ವಶಕ್ತಿವಾನ್ ಭವ

ಸದಾ ತಮ್ಮ ಮಾಸ್ಟರ್ ಸರ್ವಶಕ್ತಿವಾನ್ ಸ್ವರೂಪದ ಸ್ಮøತಿಯಲ್ಲಿದ್ದಾಗ ಎಲ್ಲಾ ಪರಿಸ್ಥಿತಿಗಳು ಈ ರೀತಿಯ ಅನುಭವ ವಾಗುವುದು ಹೇಗೆ ದಾಟಿ ಹೋಗುವ ದೃಶ್ಯದ ತರಹ. ಪರಿಸ್ಥಿತಿ ಎಂದು ತಿಳಿದಾಗ ಗಾಬರಿಯಾಗುವುದು ಆದರೆ ದಾಟಿ ಹೋಗುವ ದೃಷ್ಯ ಅರ್ಥಾತ್ ದಾರಿಯಲ್ಲಿ ಹೋಗುವ ದೃಷ್ಯ ಎಂದು ತಿಳಿದಗ ಸಹಜವಾಗಿ ಪಾರು ಮಾಡಿಬಿಡುವಿರಿ ಏಕೆಂದರೆ ದೃಷ್ಯಗಳನ್ನು ನೋಡಿ ಖುಶಿಯಾಗುವುದು, ಗಾಬರಿಯಾಗುವುದಿಲ್ಲ, ವಿಘ್ನ-ವಿಘ್ನವಲ್ಲ ಆದರೆ ಮುಂದುವರೆಯುವ ಸಾಧನವಾಗಿದೆ. ಪರೀಕ್ಷೆಯಿಂದ ಮುಂದಿನ ತರಗತಿಗೆ ಹೋಗುವಂತೆ, ಆದ್ದರಿಂದ ಎಂದೂ ಯಾವುದೇ ಮಾತಿನಲ್ಲಿ ನಿಲ್ಲ ಬೇಡಿ, ಸದಾ ಮಾಸ್ಟರ್ ಸರ್ವ ಶಕ್ತಿವಾನ್ ಆಗಿರುವೆ- ಈ ಸ್ಮೃತಿಯಿಂದ ಹಾರುವ ಕಲೆಯ ಅನುಭವ ಮಾಡುತ್ತಾ ಹೋಗಿ.

ಸ್ಲೋಗನ್: ಈ ರೀತಿ ಸಹಜಯೋಗಿಗಳಾಗಿ ನಿಮ್ಮನ್ನು ನೋಡಿದೊಡನೆ ಬೇರೆಯವರಿಗೆ ಯೋಗ ಹತ್ತುವಹಾಗಿರಬೇಕು.